**The National Women's Health Information Center**
U.S. Department of Health and Human Services
Office on Women's Health

ತಮಗೆ ಪರಿಚಿತರಿರುವ ಯಾರಾದರೂ ದೌರ್ಜನ್ಯ ಅಥವಾ ಹಿಂಸೆಗೆ ಬಲಿಯಾಗಿದ್ದರೆ, ಅಥವಾ  ಅಪರಿಚಿತರಿಂದ ದಾಳಿಗೆ ಗುರಿಯಾಗಿದ್ದರೆ, ಅವರು ಏಕಾಂಗಿಯಲ್ಲ.  ತುರ್ತು ನೆರವು ಹಾಗೂ ಬೆಂಬಲ ತತ್ ಕ್ಷಣ ಲಭ್ಯ.

ಕೌಟುಂಬಿಕ ದೌರ್ಜನ್ಯಕ್ಕೆ ತುತ್ತಾದವರಿಗಾಗಿ ರಾಷ್ಟ್ರೀಯ ಸಹಾಯವಾಣಿ (ನ್ಯಾಷನಲ್ ಡೊಮೆಸ್ಟಿಕ್ ವಯಲೆನ್ಸ್ ಹಾಟ್ ಲೈನ್) ದಿನ 24ಗಂಟೆ, ವಾರದ 7 ದಿನಗಳೂ ಕಾರ್ಯ ನಿರ್ವಹಿಸುತ್ತದೆ. ದೂರವಾಣಿ ಸಂಖ್ಯೆಗಳು ಇಂತಿವೆ: 1-800-799-SAFE(7233) ಮತ್ತು 1-800-787-3224 (TTY). ಈ ಹಾಟ್ ಲೈನ್ ದೂರವಾಣಿ ಸಂಖ್ಯೆಗಳಿಗೆ ಕರೆ ಮಾಡಿದಾಗ, ಮೊದಲು ಧ್ವನಿ ಮುದ್ರಿತ ಸಂದೇಶ ಕೇಳಿಸುತ್ತದೆ. ಆ ಬಳಿಕ ಫೋನನ್ನು ಕೆಲ ಕಾಲ ಹೋಲ್ಡ್ ಮಾಡಬೇಕಾದೀತು. ನಂತರ ಸಿಬ್ಬಂದಿ ಆಪತ್ತಿನ ಕುರಿತು ಮಾಹಿತಿ ಪಡೆದು, ಬಯಸಿದಲ್ಲಿ ಸೂಕ್ತ ನೆರವು ನೀಡಲು ಮುಂದಾಗುವರು. ಅಗತ್ಯವಿದ್ದಲ್ಲಿ,  ಮಹಿಳಾ ಆಶ್ರಯಧಾಮಗಳೊಂದಿಗೆ ಸಂಪರ್ಕ ಕಲ್ಪಿಸಲಾಗುವುದು ಮತ್ತು ಲಿಖಿತ ಮಾಹಿತಿಯನ್ನು ಕಳುಹಿಸಲಾಗುವುದು.

ಲೈಂಗಿಕ ದೌರ್ಜ್ಯನಕ್ಕೆ ಗುರಿಯಾದವರಿಗಾಗಿ ರಾಷ್ಟ್ರೀಯ ಸಹಾಯವಾಣಿ (ನ್ಯಾಷನಲ್ ಸೆಕ್ಷ್ಯುವಲ್ ಅಸಾಲ್ಟ್ ಹಾಟ್ ಲೈನ್) ದಿನ 24 ಗಂಟೆ, ವಾರದ 7 ದಿನಗಳೂ ಕಾರ್ಯ ನಿರ್ವಹಿಸುತ್ತದೆ. ದೂರವಾಣಿ ಸಂಖ್ಯೆ ಇಂತಿದೆ: 1-800-656-4673.  ಹಾಟ್ ಲೈನ್ ಸಂಪರ್ಕಿಸಿದಾಗ, ಮೊದಲು ಮೆನು ಧ್ವನಿ ಮುದ್ರಣ ಕೇಳಿಸುತ್ತದೆ. ಆಗ # 1 ಸಂಖ್ಯೆಯನ್ನು ಆಯ್ಕೆ ಮಾಡಿಕೊಂಡು, ಸಲಹೆಗಾರರೊಂದಿಗೆ ಮಾತನಾಡಬಹುದು. ಕರೆ ಮಾಡಿದವರು ವಾಸ ಮಾಡುತ್ತಿರುವ ಪ್ರದೇಶಕ್ಕೆ ಸಮೀಪದಲ್ಲಿರುವ ಆಪ್ತ ಸಲಹೆಗಾರರ ಸಂಪರ್ಕ-ವಿವರ ನೀಡಲಾಗುವುದು. ಅವರಿಂದ ಅಗತ್ಯ ನೆರವು ಪಡೆಯಬಹುದು.

ಕೌಟುಂಬಿಕ ಕ್ರೌರ್ಯ ಅಥವಾ ಹಿಂಸೆಗೆ ಬಲಿಯಾದವರು  ಅಮೆರಿಕಾದ ಆರೋಗ್ಯ ಹಾಗೂ ಮಾನವ ಸೇವೆ ಇಲಾಖೆಯ ರಾಷ್ಟ್ರೀಯ ಮಹಿಳಾ ಆರೋಗ್ಯ ಮಾಹಿತಿ ಕೇಂದ್ರವನ್ನೂ 1-800-994-9662 ಅಥವಾ 1-888-220-5446 ಅಥವಾ  ತಮ್ಮನ್ನು ಮತ್ತು ತಮ್ಮ ಮಕ್ಕಳನ್ನು ರಕ್ಷಿಸಿಕೊಳ್ಳಲು ಅಗತ್ಯವಿರುವ ಮಾಹಿತಿ ಹಾಗೂ ಇತರ ವಿವರಗಳನ್ನು http://www.4woman.gov/violence/groups/immigrant.cfm  ವೆಬ್ ಸೈಟಿನಿಂದ ಪಡೆಯಬಹುದು.  ಅಮೆರಿಕಾದಲ್ಲಿ ವಿಸಾ ಅಥವಾ ವಲಸೆಗಾರಿಕೆಯ ಸ್ಥಾನಮಾನ ಏನೇ ಇದ್ದರೂ, ನೆರವು ನೀಡಲಾಗುತ್ತದೆ.

ಸಾಮಾನ್ಯ ಮಾಹಿತಿ -ತಮ್ಮ ಮೂಲ ದೇಶದ ಸುದ್ದಿ, ಲೇಖನ, ಕಾನೂನಿನ ಮತ್ತಿತರ ಮಾಹಿತಿಗಳಿಗೆ, ದಕ್ಷಿಣ ಏಷ್ಯಾ ಮಹಿಳಾ ಜಾಲ (ಭಾರತ ಮತ್ತು ದಕ್ಷಿಣ ಏಷ್ಯಾದ ತರ ರಾಷ್ಟ್ರಗಳ ಮಹಿಳೆಯರ ವೇದಿಕೆ)  ವೆಬ್ ಸೈಟ್ www.sawnet.org ಭೇಟಿ ನೀಡಿ. ಆ ವೆಬ್ ಸೈಟಿನಲ್ಲಿರುವ ಮಾಹಿತಿ, ವಿವರಗಳಿಗೆ ಅಥವಾ ಇನ್ಯಾವುದೇ ಸ್ವಯಂ ಸೇವಾ ಸಂಸ್ಥೆಯ ವೆಬ್ ಸೈಟಿನಲ್ಲಿ ನೀಡಲಾಗಿರುವ ಮಾಹಿತಿಗೆ ಅಮೆರಿಕನ್ ಕಾನ್ಸುಲೇಟ್ ಜನರಲ್, ಚೆನ್ನೈ ಹೊಣೆಯಲ್ಲ ಎಂಬುದನ್ನು ದಯವಿಟ್ಟು ಗಮನಿಸಿ.